**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ. ಎಸ್ ನವೀನ್, ಡಿ. ಎಸ್ ಅರುಣ್, ಆರ್ ರಘು, ಕೇಶವ ಪ್ರಸಾದ್ ಎಸ್, ಡಾ: ಧನಂಜಯ ಸರ್ಜಿ, ಕಿಶೋರ್ ಕುಮಾರ್ ಪುತ್ತೂರ್ ಇವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಉತ್ತರ**

**ವಿಷಯ:**

ಹಿಂದುಳಿದ ವರ್ಗಗಳ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ವಿದ್ಯಾರ್ಥಿ ವಸತಿ ನಿಲಯಗಳಿಗೆ ಲಕ್ಷಾಂತರ ವಿದ್ಯಾರ್ಥಿಗಳು ಪ್ರವೇಶಾತಿ ಬಯಸಿ ಅರ್ಜಿ ಸಲ್ಲಿಸಿದ್ದು, ವಿದ್ಯಾರ್ಥಿಗಳಿಗೆ ಪ್ರವೇಶಾತಿ ದೊರಕದ ಕಾರಣ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ನಿಲ್ಲಿಸುತ್ತಿರುವುದು ಶೋಚನಿಯವಾಗಿದೆ. ಪ್ರಸ್ತುತ ವಸತಿ ನಿಲಯಗಳ ಸಂಖ್ಯೆಯನ್ನು ಹೆಚ್ಚಿಸುವುದರ ಬಗ್ಗೆ ಮತ್ತು ಸದರಿ ವಸತಿ ನಿಲಯಗಳ ಮೂಲ ಸೌಕರ್ಯಗಳ ಬಗ್ಗೆ ಪ್ರಸ್ತಾಪಿಸಬಯಸುತ್ತೇನೆ.

**ಉತ್ತರ:**

ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದಿಗಾಗಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ 1243 ಮೆಟ್ರಿಕ್ ಪೂರ್ವ ಹಾಗೂ 1469 ಮೆಟ್ರಿಕ್ ನಂತರದ ಹೀಗೆ ಒಟ್ಟು 2712 ವಿದ್ಯಾರ್ಥಿ ನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಸದರಿ ವಿದ್ಯಾರ್ಥಿನಿಲಯಗಳಲ್ಲಿ ಕ್ರಮವಾಗಿ 67253 ಹಾಗೂ 191438 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶದ ಸೌಲಭ್ಯವನ್ನು ಕಲ್ಪಿಸಲಾಗಿರುತ್ತದೆ. ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ | ವಿವರ | ವಿದ್ಯಾರ್ಥಿನಿಲಯಗಳ ಸಂಖ್ಯೆ | | | ಮಂಜೂರಾತಿ ಸಂಖ್ಯೆ | | |
|---|---|---|---|---|---|---|---|
| | | ಬಾಲಕರು | ಬಾಲಕಿಯರು | ಒಟ್ಟು | ಬಾಲಕರು | ಬಾಲಕಿಯರು | ಒಟ್ಟು |
| 1 | ಮೆಟ್ರಿಕ್-ಪೂರ್ವ ವಿದ್ಯಾರ್ಥಿ ನಿಲಯಗಳು | 963 | 280 | 1243 | 51742 | 15511 | 67253 |
| 2 | ಮೆಟ್ರಿಕ್-ನಂತರದ ವಿದ್ಯಾರ್ಥಿ ನಿಲಯಗಳು | 690 | 779 | 1469 | 89539 | 101899 | 191438 |
| | **ಒಟ್ಟು** | **1653** | **1059** | **2712** | **141281** | **117410** | **258691** |

ಹಿಂದುಳಿದ ವರ್ಗಗಳ ಇಲಾಖಾ ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ SHP ತಂತ್ರಾಂಶದ ಮುಖಾಂತರ ಆನ್-ಲೈನ್ ಅರ್ಜಿ ಆಹ್ವಾನಿಸಿ ನಂತರ ತಾಲ್ಲೂಕು ಮಟ್ಟದಲ್ಲಿ ಮಾನ್ಯ ಶಾಸಕರ ಅದ್ಯಕ್ಷತೆಯಲ್ಲಿನ ಆಯ್ಕೆ ಸಮಿತಿಯ ಮೂಲಕ ವಿದ್ಯಾರ್ಥಿಗಳ ಅಂಕಗಳು ಮತ್ತು ಮೀಸಲಾತಿಯನುಸಾರ ಲಭ್ಯವಿರುವ ಖಾಲಿ ಸ್ಥಾನಗಳಿಗೆ ಅನುಗುಣವಾಗಿ ಆಯ್ಕೆ ಪಟ್ಟಿ ಸಿದ್ದಪಡಿಸಿಕೊಂಡು ಪ್ರವೇಶಾತಿಯನ್ನು ಕಲ್ಪಿಸಲಾಗುತ್ತಿದೆ.

..2...

2026-27ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಲ್ಲಿ 37781 ನವೀಕರಣ ಮತ್ತು 27705 ಹೊಸ ವಿದ್ಯಾರ್ಥಿಗಳು ಹೀಗೆ ಒಟ್ಟು 65486 ವಿದ್ಯಾರ್ಥಿಗಳು ಪ್ರವೇಶಾತಿ ಪಡೆದಿರುತ್ತಾರೆ. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರಸ್ತುತದವರೆಗೆ ಪಿಯುಸಿ ಮತ್ತು ಪಿಯುಸಿ ಸಮಾನಾಂತರ ಕೋರ್ಸ್ ಹಾಗೂ ಸಾಮಾನ್ಯ ಪದವಿ ಕೋರ್ಸಿನ 89906 ನವೀಕರಣ ಮತ್ತು 40420 ಹೊಸ ವಿದ್ಯಾರ್ಥಿಗಳು ಸೇರಿದಂತೆ ಒಟ್ಟು 130326 ವಿದ್ಯಾರ್ಥಿಗಳಿಗೆ ಪ್ರವೇಶ ಪಡೆದಿದ್ದು ಪ್ರವೇಶಾತಿ ಪ್ರಕ್ರಿಯೆ ಚಾಲ್ತಿಯಲ್ಲಿರುತ್ತದೆ. ಮುಂದುವರೆದು, ವೃತ್ತಿಪರ ಹಾಗೂ ಸ್ನಾತಕೋತರ ಪದವಿ ಕೋರ್ಸಿನ ವಿದ್ಯಾರ್ಥಿಗಳಿಗೆ ಕಾಲೇಜು ಹಾಗೂ ವಿಶ್ವವಿದ್ಯಾಲಯಗಳ ತರಗತಿಗಳ ಪ್ರಾರಂಭದ ಅವಧಿಯನುಸಾರ ಆನ್-ಲೈನ್ ಅರ್ಜಿ ಆಹ್ವಾನಿಸಿ ನಿಗದಿತ ಸಮಯಕ್ಕೆ ಪ್ರವೇಶ ಪ್ರಕ್ರಿಯೆಯನ್ನು ಕೈಗೊಳ್ಳಲಾಗುವುದು. ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶ ಕೋರಿ ಸ್ವೀಕೃತವಾದ ಅರ್ಜಿಗಳು ಹಾಗೂ ಪ್ರವೇಶ ಪಡೆದ ವಿದ್ಯಾರ್ಥಿಗಳ ಜಿಲ್ಲಾವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ.

ಮೆಟ್ರಿಕ್ ಪೂರ್ವ/ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶ ಪ್ರಕ್ರಿಯೆ ನಂತರ ಜಿಲ್ಲೆಯಲ್ಲಿನ ಆಯಾ ತಾಲ್ಲೂಕಿನ ವಿದ್ಯಾರ್ಥಿ ನಿಲಯಗಳಲ್ಲಿ ಹೆಚ್ಚಿನ ಅರ್ಜಿಗಳ ಸ್ವೀಕೃತಿಗೆ ಪರ್ಯಾಯವಾಗಿ ಆಯಾ ಸಾಲಿಗೆ ಅನ್ವಯಿಸುವಂತೆ ಬೇಡಿಕೆ ಇರುವ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶ ಹಾಗೂ ಮೂಲಭೂತ ಸೌಕರ್ಯಗಳು ಲಭ್ಯವಿದ್ದಲ್ಲಿ ತಾತ್ಕಾಲಿಕವಾಗಿ ಸ್ಥಾನಗಳನ್ನು ಆಂತರಿಕ ವರ್ಗಾವಣೆ ಮಾಡಿಕೊಂಡು ಹೆಚ್ಚುವರಿ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವನ್ನು ಕಲ್ಪಿಸಲಾಗುತ್ತಿದೆ.

ಮುಂದುವರೆದು, ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಸಲ್ಲಿಸಿ ಪ್ರವೇಶಾತಿ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾಸಿರಿ ಊಟ ಮತ್ತು ವಸತಿ ಸಹಾಯ ಯೋಜನೆಯಡಿ ಅನುದಾನದ ಲಭ್ಯತೆಯನುಸಾರ ಮಾಸಿಕ ರೂ.1500/-ರಂತೆ 10 ತಿಂಗಳ ಅವಧಿಗೆ ರೂ.15000/-ಗಳನ್ನು ಮಂಜೂರು ಮಾಡಲಾಗುತ್ತದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿದ್ಯಾರ್ಥಿನಿಲಯಗಳಿಗೆ ಹೆಚ್ಚಿನ ಬೇಡಿಕೆಯಿರುವ ಹಿನ್ನಲೆಯಲ್ಲಿ, ಪ್ರತಿ ಆರ್ಥಿಕ ವರ್ಷದಲ್ಲಿ ಹೊಸದಾಗಿ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಿ ಹಾಗೂ ಹಾಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯಾಬಲವನ್ನು ಹೆಚ್ಚಳ ಮಾಡಿ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

..3...

2022-23ನೇ ಸಾಲಿನಲ್ಲಿ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸಂಖ್ಯಾಬಲವನ್ನು ಶೇ.25% ರಂತೆ ಹೆಚ್ಚಳ ಮಾಡಿ ಒಟ್ಟಾರೆಯಾಗಿ 30000 ವಿದ್ಯಾರ್ಥಿಗಳಿಗೆ ಹೆಚ್ಚುವರಿಯಾಗಿ ಪ್ರವೇಶಾವಕಾಶ ಕಲ್ಪಿಸಲಾಗಿದೆ.

**ಕಳೆದ 5 ವರ್ಷಗಳಲ್ಲಿ ಹೊಸದಾಗಿ ಮಂಜೂರು ಮಾಡಲಾದ ವಿದ್ಯಾರ್ಥಿನಿಲಯಗಳ ವಿವರಗಳು ಈ ಕೆಳಕಂಡಂತಿವೆ:**

| ವರ್ಷ | ವಿದ್ಯಾರ್ಥಿ ನಿಲಯಗಳ ಸಂಖ್ಯೆ | | ಮಂಜೂರಾತಿ ಸಂಖ್ಯೆ | | ಒಟ್ಟು ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಒಟ್ಟು ಮಂಜೂರಾತಿ ಸಂಖ್ಯೆ |
|---|---|---|---|---|---|---|
| | ಬಾಲಕ | ಬಾಲಕಿ | ಬಾಲಕ | ಬಾಲಕಿ | | |
| 2022-23 | 2 | 2 | 200 | 200 | 4 | 400 |
| 2023-24 | 1 | 2 | 125 | 250 | 3 | 375 |
| 2024-25 | 79 | 76 | 7915 | 7555 | 155 | 15470 |
| 2025-26 | 31 | 31 | 3100 | 3100 | 62 | 6200 |
| 2026-27 | 25 | 25 | 3750 | 3750 | 50 | 7500 |
| **ಒಟ್ಟು** | **138** | **136** | **15090** | **14855** | **274** | **29945** |

ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಲ್ಲಿನ ವಿದ್ಯಾರ್ಥಿಗಳಿಗೆ ಉಚಿತ ಊಟ, ವಸತಿ ಸೌಕರ್ಯದ ಜೊತೆಗೆ ಅತ್ಯಂತ ಅವಶ್ಯಕವಿರುವ ಮೂಲಭೂತ ಸೌಲಭ್ಯಗಳಾದ ಸಮವಸ್ತ್ರ, ಅಲ್ಪಕಾಲಿಕ ಭೋದಕರ ವ್ಯವಸ್ಥೆ, ಪಠ್ಯ-ಪುಸ್ತಕ, ಲೇಖನ ಸಾಮಗ್ರಿಗಳು (ಮೆಟ್ರಿಕ್-ಪೂರ್ವ ವಿದ್ಯಾರ್ಥಿಗಳಿಗೆ) ಮತ್ತು ಮೆಟ್ರಿಕ್-ಪೂರ್ವ ಮತ್ತು ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ ಜಮಖಾನ-ಹೊದಿಕೆ, ಶುಚಿ-ಸಂಭ್ರಮ ಕಿಟ್, ದಿನಪತ್ರಿಕೆ, ಮ್ಯಾಗಜಿನ್ ಜೊತೆಗೆ ನಿಲಯಗಳಿಗೆ ಮೂಲಭೂತ ಸೌಕರ್ಯಗಳಾದ ತಟ್ಟೆ-ಲೋಟ, ಸೋಲಾರ್ ವಾಟರ್ ಹೀಟರ್, ವಾಟರ್ ಪ್ಯೂರಿಫೈಯರ್, ಟೂ-ಟಯರ್ ಕಾಟ್, ಹಾಸಿಗೆ, ಕಂಪ್ಯೂಟರ್, ಯು.ಪಿ.ಎಸ್, ಡೈನಿಂಗ್ ಟೇಬಲ್, ಸಿ.ಸಿ.ಕ್ಯಾಮೆರಾ, ಚಪ್ಪಲಿ ಸ್ಟ್ಯಾಂಡ್, ಗ್ರಂಥಾಲಯ ವ್ಯವಸ್ಥೆ, ಕ್ರೀಡಾ ಸಾಮಗ್ರಿ, ನ್ಯಾಪ್‌ಕಿನ್ ಬರ್ನಿಂಗ್ ಮೆಷಿನ್ ಹಾಗೂ ಇತರೆ ಸೌಲಭ್ಯಗಳನ್ನು ಕಲ್ಪಿಸಲಾಗಿರುತ್ತದೆ. ಕೆಲವು ಬಾಡಿಗೆ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶದ ಕೊರತೆಯಿಂದ ಕೆಲವು ಸೌಕರ್ಯಗಳನ್ನು ಕಲ್ಪಿಸಲು ಸಾಧ್ಯವಾಗಿರುವುದಿಲ್ಲ.

ಆದಾಗ್ಯೂ, ವಿದ್ಯಾರ್ಥಿನಿಲಯಗಳಲ್ಲಿನ ಮಂಜೂರಾತಿಯ ಸಂಖ್ಯೆಯ ಬೇಡಿಕೆಗೆ ಅನುಗುಣವಾಗಿ ಹೆಚ್ಚಿನ ಅಗತ್ಯವಿರುವ ಮೂಲಭೂತ ಸೌಲಭ್ಯಗಳ ಕೊರತೆಯಿರುತ್ತದೆ. ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಿಗೆ ಪ್ರತಿ ವರ್ಷ ಆಯವ್ಯಯದಲ್ಲಿ ಒದಗಿಸುವ ಅನುದಾನ, ಸ್ಥಳೀಯ ಸಂಸ್ಥೆಗಳಲ್ಲಿ ಕಲ್ಯಾಣ ಕಾರ್ಯಕ್ರಮಗಳಿಗೆ ನಿಗಧಿಪಡಿಸಿರುವ ಅನುದಾನ, ಕಲ್ಯಾಣ

..4....

ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಅನುದಾನ ಹಾಗೂ CSR ಅನುದಾನದಡಿ ಅಗತ್ಯ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ಆದಾಗ್ಯೂ ಎಲ್ಲಾ ವಿದ್ಯಾರ್ಥಿನಿಲಯಗಳಿಗೂ ಸಂಪೂರ್ಣವಾಗಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸಾಧ್ಯವಾಗಿರುವುದಿಲ್ಲ.

2026-27ನೇ ಸಾಲಿನ ಆಯವ್ಯಯದಲ್ಲಿ ಇಲಾಖೆಯ ಕಾರ್ಯನಿರ್ವಹಿಸುತ್ತಿರುವ ಹಾಗೂ ಹೊಸದಾಗಿ ಮಂಜೂರು ಮಾಡಲಾದ ವಿದ್ಯಾರ್ಥಿನಿಲಯಗಳಿಗೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ರೂ.30.00 ಕೋಟಿಗಳ ಅನುದಾನ ನಿಗಧಿಪಡಿಸಲಾಗಿದ್ದು, ಸದರಿ ಅನುದಾನದಲ್ಲಿ ವಿದ್ಯಾರ್ಥಿಗಳಿಗೆ ಅತ್ಯಂತ ಅಗತ್ಯವಿರುವ ಸೌಕರ್ಯಗಳಾದ 15000 ಹಾಸಿಗೆ ಮತ್ತು 7500 ಮಂಚಗಳನ್ನು ಕಲ್ಪಿಸಲು ಕ್ರಮವಹಿಲಾಗಿದೆ. ಪ್ರಸಕ್ತ ಸಾಲಿನ ಆಯವ್ಯಯದಲ್ಲಿ ಜಿಲ್ಲಾ ವಲಯದಲ್ಲಿ ವಿದ್ಯಾರ್ಥಿನಿಲಯಗಳ ನಿರ್ವಹಣೆಗೆ ಒದಗಿಸಲಾದ ಅನುದಾನದಲ್ಲಿ ಅನುದಾನದ ಲಭ್ಯತೆಯನುಸಾರ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗುವುದು.

ಮುಂದುವರೆದು, ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಉತ್ತಮ ಶೈಕ್ಷಣಿಕ ವಾತಾವರಣ ನಿರ್ಮಿಸಲು ವಿದ್ಯಾರ್ಥಿನಿಲಯಗಳಲ್ಲಿ ಅತ್ಯಂತ ಅವಶ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒಂದು ಬಾರಿಗೆ ಕಲ್ಪಿಸಲು ಜಿಲ್ಲೆಗಳಿಂದ ಬೇಡಿಕೆಯನ್ನು ಪಡೆಯಲಾಗಿದ್ದು, ಜಿಲ್ಲೆಗಳಿಂದ ಸ್ವೀಕೃತವಾಗಿರುವ ಬೇಡಿಕೆಯನುಸಾರ ವಿದ್ಯಾರ್ಥಿನಿಲಯಗಳಲ್ಲಿ ಅತ್ಯಂತ ಅಗತ್ಯವಿರುವ ಈ ಕೆಳಕಂಡ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಒಟ್ಟಾರೇ ಅಂದಾಜು ರೂ41923.52 ಲಕ್ಷಗಳ ಅನುದಾನದ ಅವಶ್ಯಕತೆ ಇರುತ್ತದೆ.

| **ಕ್ರ. ಸಂ** | **ಮೂಲಭೂತ ಸೌಲಭ್ಯದ ಹೆಸರು** | **ಅವಶ್ಯವಿರುವ ಸಂಖ್ಯೆ** | **ಅಂದಾಜು ಮೊತ್ತ ರೂ.ಗಳಲ್ಲಿ (Per unit)** | **ಒಟ್ಟಾರೇ ಅಗತ್ಯವಿರುವ ಅಂದಾಜು ಅನುದಾನ (ರೂ.ಲಕ್ಷಗಳಲ್ಲಿ)** |
|---|---|---|---|---|
| 1 | ಟೂ-ಟೈಯರ್ ಕಾಟ್ (ಮಂಚ) | 28179 | 26666.00 | 7514.21 |
| 2 | ಹಾಸಿಗೆಗಳು | 110754 | 6,600.00 | 7309.76 |
| 3 | ಸೋಲಾರ್ ವಾಟರ್ ಹೀಟರ್/ ಹೀಟ್ ಪಂಪ್ಸ್ (500LPD) | 1265 | 2,00,000.00 | 2530.00 |
| 4 | ಯು.ಪಿ.ಎಸ್ | 633 | 1,00,000.00 | 633.00 |
| 5 | ಕಂಪ್ಯೂಟರ್ | 11225 | 75,000.00 | 8418.75 |
| 6 | ಡೈನಿಂಗ್ ಟೇಬಲ್ | 35488 | 35000.00 | 12420.80 |
| 7 | ಸ್ಮಾರ್ಟ್ ಕ್ಲಾಸ್ | 2575 | 100000.00 | 2575.00 |
| 8 | ಸಿಸಿ ಟಿವಿ | 522 | 100000.00 | 522.00 |
| **ಒಟ್ಟಾರೇ ಅವಶ್ಯಕವಿರುವ ಅಂದಾಜು ಅನುದಾನ** | | | | **41923.52** |

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ 2712 ವಿದ್ಯಾರ್ಥಿನಿಲಯಗಳ ಪೈಕಿ 1642 ಸ್ವಂತ ಕಟ್ಟಡಗಳಲ್ಲಿ, 787 ಬಾಡಿಗೆ ಕಟ್ಟಡಗಳಲ್ಲಿ ಹಾಗೂ 283 ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿವೆ. ಬಾಡಿಗೆ ಮತ್ತು ಉಚಿತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿನಿಯಗಳ ಪೈಕಿ 156 ಕಟ್ಟಡ ಕಾಮಗಾರಿಗಳು ಪ್ರಗತಿಯಲ್ಲಿದ್ದು, 424 ನಿವೇಶನಗಳು ಲಭ್ಯವಿರುತ್ತವೆ. 2025-26ನೇ ಸಾಲಿನ ಆಯವ್ಯಯದಲ್ಲಿ ಹೊಸದಾಗಿ 50 ವಿದ್ಯಾರ್ಥಿನಿಲಯ ಕಟ್ಟಡ ನಿರ್ಮಾಣವನ್ನು ಒಟ್ಟು ರೂ.250.00 ಕೋಟಿಗಳ ಮೊತ್ತದಲ್ಲಿ ಕೈಗೊಳ್ಳಲು ಘೋಷಿಸಲಾಗಿದ್ದು, ಪ್ರಸಕ್ತ ಸಾಲಿನಲ್ಲಿ ಈ ಸಂಬಂಧ ರೂ.83.00 ಕೋಟಿಗಳ ಅನುದಾನ ಒದಗಿಸಲಾಗಿದೆ.

ಸಂಖ್ಯೆ: ಹಿಂವಕ 637 ಬಿಎಂಎಸ್ 2026.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

**ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ. ಎಸ್ ನವೀನ್, ಡಿ. ಎಸ್ ಅರುಣ್, ಆರ್ ರಘು, ಕೇಶವ ಪ್ರಸಾದ್ ಎಸ್, ಡಾ: ಧನಂಜಯ ಇವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಅನುಬಂಧ**

**2026-27ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಕೋರಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಹಾಗೂ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ**

| ಕ್ರ.ಸಂ | ಜಿಲ್ಲೆ ಹೆಸರು | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ನವೀಕರಣ ವಿದ್ಯಾರ್ಥಿಗಳ ಸಂಖ್ಯೆ | ಹೊಸದಾಗಿ ಪ್ರವೇಶ ಕೋರಿ ಸ್ವೀಕೃವಾದ ಅರ್ಜಿಗಳ ಸಂಖ್ಯೆ | ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|---|
| 1 | ಬಾಗಲಕೋಟೆ | 43 | 2840 | 1690 | 2169 | 1132 | 2822 |
| 2 | ಬಳ್ಳಾರಿ | 20 | 1215 | 783 | 948 | 445 | 1228 |
| 3 | ಬೆಳಗಾವಿ | 99 | 5195 | 2799 | 4470 | 2284 | 5083 |
| 4 | ಬೆಂಗಳೂರು ಗ್ರಾಮಾಂ | 16 | 700 | 340 | 310 | 255 | 595 |
| 5 | ಬೆಂಗಳೂರು ನಗರ | 1 | 50 | 20 | 31 | 29 | 49 |
| 6 | ಬೀದರ | 38 | 2152 | 1251 | 1076 | 894 | 2145 |
| 7 | ಚಾಮರಾಜನಗರ | 12 | 530 | 284 | 248 | 220 | 504 |
| 8 | ಚಿಕ್ಕಬಳ್ಳಾಪುರ | 31 | 1625 | 767 | 817 | 737 | 1504 |
| 9 | ಚಿಕ್ಕಮಗಳೂರು | 56 | 2950 | 1669 | 1652 | 1284 | 2953 |
| 10 | ಚಿತ್ರದುರ್ಗ | 42 | 2255 | 1229 | 1296 | 1015 | 2244 |
| 11 | ದಕ್ಷಿಣ ಕನ್ನಡ | 21 | 1005 | 639 | 575 | 360 | 999 |
| 12 | ದಾವಣಗೆರೆ | 35 | 1875 | 1057 | 991 | 821 | 1878 |
| 13 | ಧಾರವಾಡ | 25 | 1195 | 578 | 889 | 604 | 1182 |
| 14 | ಗದಗ | 32 | 1840 | 1057 | 1410 | 706 | 1763 |

| ಕ್ರ.ಸಂ | ಜಿಲ್ಲೆ ಹೆಸರು | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ನವೀಕರಣ ವಿದ್ಯಾರ್ಥಿಗಳ ಸಂಖ್ಯೆ | ಹೊಸದಾಗಿ ಪ್ರವೇಶ ಕೋರಿ ಸ್ವೀಕೃವಾದ ಅರ್ಜಿಗಳ ಸಂಖ್ಯೆ | ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|---|
| 15 | ಹಾಸನ | 60 | 3150 | 1558 | 1511 | 1304 | 2862 |
| 16 | ಹಾವೇರಿ | 45 | 2395 | 1325 | 1682 | 991 | 2316 |
| 17 | ಕಲಬುರಗಿ | 73 | 3930 | 2490 | 2003 | 1440 | 3930 |
| 18 | ಕೊಡಗು | 19 | 755 | 314 | [illegible] | 252 | 566 |
| 19 | ಕೋಲಾರ | 25 | 1346 | 699 | 686 | 633 | 1332 |
| 20 | ಕೊಪ್ಪಳ | 42 | 2670 | 1679 | 2658 | 967 | 2646 |
| 21 | ಮಂಡ್ಯ | 62 | 3350 | 1887 | 1535 | 1408 | 3295 |
| 22 | ಮೈಸೂರು | 41 | 1810 | 960 | 398 | 745 | 1705 |
| 23 | ರಾಯಚೂರು | 36 | 2040 | 1106 | 1344 | 930 | 2036 |
| 24 | ರಾಮನಗರ | 25 | 1058 | 624 | 458 | 425 | 1049 |
| 25 | ಶಿವಮೊಗ್ಗ | 57 | 3091 | 1772 | 1857 | 1291 | 3063 |
| 26 | ತುಮಕೂರು | 57 | 2900 | 1504 | 1806 | 1333 | 2837 |
| 27 | ಉಡುಪಿ | 18 | 990 | 592 | 592 | 366 | 958 |
| 28 | ಉತ್ತರಕನ್ನಡ | 68 | 3826 | 2292 | 2038 | 1380 | 3672 |
| 29 | ವಿಜಯನಗರ | 36 | 2515 | 1406 | 1580 | 1025 | 2431 |
| 30 | ವಿಜಯಪುರ | 64 | 3610 | 2051 | 2401 | 1482 | 3533 |
| 31 | ಯಾದಗಿರಿ | 44 | 2390 | 1359 | 1398 | 947 | 2306 |
|  | **ಒಟ್ಟು** | **1243** | **67253** | **37781** | **41608** | **27705** | **65486** |

**● ಮಾನ್ಯ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಕೆ. ಎಸ್ ನವೀನ್, ಡಿ. ಎಸ್ ಅರುಣ್, ಆರ್ ರಘು, ಕೇಶವ ಪ್ರಸಾದ್ ಎಸ್, ಡಾ: ಧನಂಜಯ ಇವರು ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆಅನುಬಂಧ**

**2026-27ನೇ ಸಾಲಿನಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಕಾರ್ಯನಿರ್ವಹಿಸುತ್ತಿರುವ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಪ್ರವೇಶಕೋರಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಹಾಗೂ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರ**

| ಕ್ರ.ಸಂ | ಜಿಲ್ಲೆ ಹೆಸರು | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ನವೀಕರಣ ವಿದ್ಯಾರ್ಥಿಗಳ ಸಂಖ್ಯೆ | ಹೊಸದಾಗಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|---|
| 1 | ಬಾಗಲಕೋಟೆ | 49 | 6788 | 3678 | 20329 | 1525 | 5203 |
| 2 | ಬಳ್ಳಾರಿ | 35 | 4761 | 2288 | 1836 | 1067 | 3355 |
| 3 | ಬೆಳಗಾವಿ | 72 | 10000 | 5253 | 24988 | 2691 | 7944 |
| 4 | ಬೆಂಗಳೂರು ಗ್ರಾಮಾಂತ | 19 | 2119 | 1292 | 324 | 246 | 1538 |
| 5 | ಬೆಂಗಳೂರು ನಗರ | 80 | 10497 | 5378 | 1068 | 514 | 5892 |
| 6 | ಬೀದರ | 40 | 5115 | 3227 | 1778 | 1055 | 4282 |
| 7 | ಚಾಮರಾಜನಗರ | 22 | 2528 | 898 | 639 | 410 | 1308 |
| 8 | ಚಿಕ್ಕಬಳ್ಳಾಪುರ | 31 | 4138 | 1500 | 1621 | 1263 | 2763 |
| 9 | ಚಿಕ್ಕಮಗಳೂರು | 47 | 6306 | 2192 | 2807 | 1866 | 4058 |
| 10 | ಚಿತ್ರದುರ್ಗ | 67 | 8244 | 4920 | 2791 | 2030 | 6950 |
| 11 | ದಕ್ಷಿಣ ಕನ್ನಡ | 63 | 8026 | 4996 | 2286 | 1335 | 6331 |
| 12 | ದಾವಣಗೆರೆ | 56 | 7582 | 2785 | 3475 | 2128 | 4913 |
| 13 | ಧಾರವಾಡ | 73 | 9625 | 3143 | 7642 | 499 | 3642 |
| 14 | ಗದಗ | 36 | 4755 | 1489 | 4450 | 689 | 2178 |
| 15 | ಹಾಸನ | 60 | 8071 | 2612 | 3158 | 1626 | 4238 |

| ಕ್ರ.ಸಂ | ಜಿಲ್ಲೆ ಹೆಸರು | ವಿದ್ಯಾರ್ಥಿ ನಿಲಯಗಳ ಸಂಖ್ಯೆ | ಮಂಜೂರಾತಿ ಸಂಖ್ಯೆ | ನವೀಕರಣ ವಿದ್ಯಾರ್ಥಿಗಳ ಸಂಖ್ಯೆ | ಹೊಸದಾಗಿ ಸ್ವೀಕೃತವಾದ ಅರ್ಜಿಗಳ ಸಂಖ್ಯೆ | ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ | ಒಟ್ಟು ಪ್ರವೇಶ ಪಡೆದ ವಿದ್ಯಾರ್ಥಿಗಳ ಸಂಖ್ಯೆ |
|---|---|---|---|---|---|---|---|
| 16 | ಹಾವೇರಿ | 40 | 5218 | 2572 | 3379 | 1519 | 4091 |
| 17 | ಕಲಬುರಗಿ | 65 | 8294 | 3661 | 5233 | 1815 | 5476 |
| 18 | ಕೊಡಗು | 23 | 2450 | 1170 | 484 | 427 | 1597 |
| 19 | ಕೋಲಾರ | 36 | 3601 | 1165 | 1056 | 1022 | 2187 |
| 20 | ಕೊಪ್ಪಳ | 48 | 6274 | 3434 | 4841 | 1577 | 5011 |
| 21 | ಮಂಡ್ಯ | 54 | 6861 | 4415 | 2002 | 1297 | 5712 |
| 22 | ಮೈಸೂರು | 75 | 10110 | 3784 | 4749 | 1578 | 5362 |
| 23 | ರಾಯಚೂರು | 38 | 5088 | 2684 | 4824 | 1294 | 3978 |
| 24 | ರಾಮನಗರ | 28 | 3181 | 1491 | 565 | 412 | 1903 |
| 25 | ಶಿವಮೊಗ್ಗ | 84 | 11630 | 5258 | 5587 | 3168 | 8426 |
| 26 | ತುಮಕೂರು | 66 | 8411 | 3726 | 4743 | 2615 | 6341 |
| 27 | ಉಡುಪಿ | 29 | 4094 | 2465 | 1636 | 918 | 3383 |
| 28 | ಉತ್ತರಕನ್ನಡ | 37 | 4750 | 2176 | 2328 | 1186 | 3362 |
| 29 | ವಿಜಯನಗರ | 32 | 4395 | 2329 | 2592 | 934 | 3263 |
| 30 | ವಿಜಯಪುರ | 41 | 5613 | 2460 | 9939 | 1175 | 3636 |
| 31 | ಯಾದಗಿರಿ | 23 | 2913 | 1465 | 2118 | 538 | 2003 |
|  | **ಒಟ್ಟು** | **1469** | **191438** | **89906** | **135268** | **40420** | **130326** |

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು